**ಸಾಕ್ಷಿಗೆ ದಿನಾಂಕಃ 09.03.2026 ರಂದು ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ. ವಿ.ಎಂ.ಎನ್.ಪಿ. ವಕೀಲರಿಂದಃ</u>**

ನಮ್ಮ ತಂದೆ ತಾಯಿ 1989 ರಲ್ಲಿ ಮದುವೆ ಆಗಿರುತ್ತಾರೆ. ನನ್ನ ಜನ್ಮ ದಿನಾಂಕ.14.10.1990 ಆಗಿರುತ್ತದೆ. 2 ನೇ ವಾದಿಯು 1991 ರಲ್ಲಿ ಜನಿಸಿರುತ್ತಾರೆ. ನಮ್ಮ ತಂದೆ ವ್ಯವಸಾಯ ಮತ್ತು ಬೆಂಗಳೂರಿನಲ್ಲಿ ಆಟೋ ಓಡಿಸುತ್ತಿದ್ದರು. ನಾನು ಹುಟ್ಟಿದಾಗಿನಿಂದಲೂ ಬೆಂಗಳೂರಿನಲ್ಲಿ ನಮ್ಮ ತಂದೆ ಆಟೋ ಓಡಿಸುತ್ತಿದ್ದರು. ಸದರಿ ವೃತ್ತಿಯನ್ನು ಹೊರತುಪಡಿಸಿ ಬೆಂಗಳೂರಿನಲ್ಲಿ ಬೇರೆ ಕೆಲಸವನ್ನು ಮಾಡುತ್ತಿರಲಿಲ್ಲ. ನಮ್ಮ ತಂದೆ ಮಧ್ಯವ್ಯಸನಿಯಾಗಿದ್ದರು. ಆದ್ದರಿಂದ ಅವರ ಆರೋಗ್ಯ ಹಾಳಾಗಿರುತ್ತದೆ. ಅವರು ಲಿವರ್ ಮತ್ತು ಕಿಡ್ನಿ ಸಮಸ್ಯೆಯಿಂದ ತೀರಿಕೊಂಡರು ಎಂದರೆ ಸರಿ. ನಾನು 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿರುತ್ತೇನೆ. ನಂತರ ನಾನು ಓದಿರುವುದಿಲ್ಲ. 2 ನೇ ವಾದಿಯು 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿರುತ್ತಾರೆ. ಆ ಸಮಯದಲ್ಲಿ ನಾವುಗಳೆಲ್ಲರೂ ಬೆಂಗಳೂರಿನಲ್ಲಿ ತಂದೆ ತಾಯಿಯ ಜೊತೆ ವಾಸವಿದ್ದೆವು. ನಾನು ಬೆಂಗಳೂರಿನಲ್ಲಿ ಆಟೋ ಓಡಿಸುತ್ತಿದ್ದೆನು ಹಾಗೂ ನನ್ನ ತಮ್ಮ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದನು.

ನಮ್ಮ ತಂದೆ ಬೆಂಗಳೂರಿಗೆ ಹೋಗುವ ಮೊದಲು ಅಜ್ಜಿ ಹಾಗೂ ಚಿಕ್ಕಪ್ಪಂದಿರ ಜೊತೆ ಒಟ್ಟಾಗಿ ವಾಸವಿದ್ದರು ಎಂದರೆ ಸರಿ. 2007 ರಲ್ಲಿ ನಾನು ಮತ್ತು ನನ್ನ ತಮ್ಮ ಅಪ್ರಾಪ್ತರು ಎಂದರೆ ಸರಿ. ಈ ದಾವೆಯ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.

2 ನೇ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಾಜರುಪಡಿಸಿದ ದಾಖಲುಗಳ ಬಗ್ಗೆ ನನಗೆ ನೆನಪಿಲ್ಲ. ಈ ದಾವೆಯನ್ನು ಸಲ್ಲಿಸುವ ಮೊದಲು ನಮ್ಮ ತಂದೆಗೂ ಸಹ ನೋಟಿಸನ್ನು ನೀಡಿರುತ್ತೇವೆ ಎಂದರೆ ಸರಿ. ಸದರಿ ನೋಟಿಸಿಗೆ ನಮ್ಮ ತಂದೆ ಉತ್ತರ ನೀಡಿರುವುದಿಲ್ಲ. ಈ ದಾವೆಯನ್ನು ಸಲ್ಲಿಸುವಾಗ ರೆಡ್ಡಿ ಕಾಲೋನಿ, ಟಿ.ನರಸೀಪುರದಲ್ಲಿ ವಾಸವಿದ್ದೆವು ಎಂದರೆ ಸಾಕ್ಷಿಯು ಮೈಸೂರಿನಲ್ಲಿ ವಾಸವಿದ್ದೆವು ಎಂದು ನುಡಿದಿರುತ್ತಾರೆ. ನಮ್ಮ ತಂದೆಯ ಜೊತೆ ಶಾಮೀಲಾಗಿ ಸುಳ್ಳು ವಿಳಾಸವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 2010 ರಿಂದ ಪ್ರೈಮರಿ ಸ್ಕೂಲ್ ರಸ್ತೆಯ ವಿಳಾಸದಲ್ಲಿ ವಾಸವಿರುತ್ತೇವೆ. ಸದರಿ ವಿಳಾಸಲ್ಲಿ ವಾಸವಿದ್ದ ಬಗ್ಗೆ ನಮ್ಮ

ತಾಯಿಯ ಓಟರ್ ಐ.ಡಿ. ಇರುತ್ತದೆ. ಸದರಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಪ್ರಸ್ತುತ ಮೈಸೂರಿನಲ್ಲಿ ವಾಸವಿರುತ್ತೇನೆ. 2020-21 ನೇ ಸಾಲಿನಲ್ಲಿ ನಮ್ಮ ತಂದೆಯನ್ನು ಮೈಸೂರಿನ ಕಾವೇರಿ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದೆವು. ಚಿಕಿತ್ಸೆಯ ವೆಚ್ಚವನ್ನು ನಮ್ಮ ತಾಯಿ ಭರಿಸಿರುತ್ತಾರೆ. 2010 ರಿಂದ 2022 ರವರೆಗೆ ವಾಸವಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ತಂದೆಯ ತಂದೆ ಯಾವ ವರ್ಷದಲ್ಲಿ ತೀರಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿ ನಮ್ಮ ತಂದೆಯ ಸಹೋದರಿ ಎಂದರೆ ಸರಿ. ದಿ.05.02.2007 ಮತ್ತು 30.05.2007 ರಂದು ನಮ್ಮ ತಂದೆ ಹಾಗೂ 5 ನೇ ಪ್ರತಿವಾದಿಯು ಸರ್ವೆ ನಂ.38/1 ರಲ್ಲಿ 24 ಗುಂಟೆ, 36/2 ರಲ್ಲಿ 3 ಗುಂಟೆ, 37/9 ರಲ್ಲಿ 9 1/2 ಗುಂಟೆ ಒಟ್ಟು 36 1/2 ಗುಂಟೆಗಳ ಪೈಕಿ 18 1/2 ಗುಂಟೆಯನ್ನು ಪ್ರತ್ಯೇಕವಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರ ಆಗುವ ಮೊದಲು ನಮ್ಮ ಅಜ್ಜಿ, ತಂದೆ ಮತ್ತು ಚಿಕ್ಕಪ್ಪಂದಿರ ನಡುವೆ ಪಂಚಾಯಿತಿ ಪಾಲು ಪಾರಿಕತ್ತು ಆಗಿತ್ತು ಎಂದರೆ ಸರಿಯಲ್ಲ. 1 ನೇ ದಾವಾ ಸ್ವತ್ತು ಈಗಲೂ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಕ್ರಯವಾದ ದಿನದಿಂದ 2 ನೇ ಪ್ರತಿವಾದಿಯು 1 ನೇ ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(2 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**